ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

1887ನೇ ಇಸವಿ ಆರ್ಜೀ ನಂಬರ್ 280.

ಮೃತಪಟ್ಟ ಸಿದ್ದಲಿಂಗಶೆಟ್ಟಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸಿದ್ದಶೆಟ್ಟಿ, ಮೃತಪಟ್ಟ ಸದರೀ ಸಿದ್ದಶೆಟ್ಟರಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಕಾರ್ಖಾನಹಳ್ಳಿ ಸ್ಥಳದ ಸಿದ್ದ ಶೆಟ್ಟಿಯು ಕಾರ್ಖಾನಹಳ್ಳಿ ವಾಸಸ್ಥರಾಗಿ ಮೃತಪಟ್ಟ ಸಿದ್ದಲಿಂಗಶೆಟ್ಟಿ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವ ಮ್ನ ವಸೂಲ್ ಮಾಡುವದಕ್ಕೆ 1860 ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸಿದ್ದಶೆಟ್ಟಿಯ ಅರ್ಜಿಯನ್ನು 1887ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದಲಿಂಗಶೆಟ್ಟಿ ಆಸ್ತಿಗೆ ಹಕ್ಕುದಾರರಾದ ವಿಸಿ ಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಏಪ್ರೆಲ್ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತು ಕೊಟ್ಟೆನೆ ಕೊಡೋಣಾಗಿದೆ.

ಸಿ. ಕ್ರೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

1887ನೇ ಇಸವಿ ಆರ್ಜೀ ನಂಬರ್ 137.

ಮೃತಪಟ್ಟ ಪಟೇಲ್‌ಬಸವೇಗೌಡರ ಆಸ್ತಿ ವಿಷಯದಲ್ಲಿ-

ಅರ್ಜೀದಾರ ಹೊಂಬಾಳೆ ಮೈನರ್ ಗಾರ್ಡಿಯರ್ ಮತ್ತು ಸೋದರಮಾವನಾದ ಹೊಂನನು ಮೃತಪಟ್ಟ ಸದರೀ ಪಟೇಲ್ ಬಸವೇ ಗೌಡರಿಗೆ ಮಗಳು ಹೊಂಬಾಳೆ ಮೈನರ್ ಸಬಬು ಗಾರ್ಡಿಯರ್ ಆಗಬೇಕೆಂಬ ಹಕ್ಕುದಾರಿ ಮೇಲೆ ಚುಳವಳ್ಳಿ ತಾಲ್ಲೂಕು ರಾವಣಿ ಸ್ಥಳದ ಸದರೀ ಹೊಂನನು ಡಿಟೋ ತಾಲ್ಲೂಕು ಯಮದೂರು ವಾಸಸ್ಥರಾಗಿ ಮೃತಪಟ್ಟ ಪಟೇಲ್ ಬಸವೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿ ಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹೊಂನನ ಅರ್ಜಿಯನ್ನು 1887ನೇ ಇಸವಿ ಜೂನ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ಬಸವೇಗೌಡರ ಆಸ್ತಿಗೆ ಹಕ್ಕುದಾರ ರಾವ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 177.

ಮೃತಪಟ್ಟ ಮೈಸೂರು ಡೆಪ್ಯೂಟಿ ಕಮ್ಮಿಷನರಾಗಿದ್ದ ಅಬ್ದುಲ್‌ಖಾದರ್ ಸಾಹೇಬರವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ತುಮಕೂರು ಡಿಸ್ಟ್ರಿಕ್ಟು ಪೋಲೀಸ್ ಅ|| ಕಮ್ಮಿಷನರ್ ಮೆ|| ಮಹಮ್ಮದಲ್ಲಿಯವರು ಮೃತಪಟ್ಟ ಸದರಿ ಅಬ್ದುಲ್‌ಖಾದರ್ ಸಾಹೇಬರವರಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆಯು ಮತ್ತು ಸದರೀ ಅಬ್ದುಲ್‌ಖಾದರ್ ಸಾಹೇಬರವರ ಮಕ್ಕಳಾದ 1ನೇ ಆಷಾ ಬೀಬಿ 2ನೇ ಸಖೀನಾಬೀಬಿ 3ನೇ ರಬಿಯಾಬೀಬಿ ಈ ಮೂರುಜನರು ತಮ್ಮಹೆಸರಿಗೆ ಸರ್ಟಿಫಿಕೇಟ್ ಆಗತಕ್ಕ ಬಗ್ಯೆ ವಿಷ್ಪು ಯಿರುತ್ತಾರೆಂತ ಲೂ ತುಮಕೂರು ಸ್ಥಳದ ಸದರೀ ಮೆ|| ಮಹಮ್ಮದಲ್ಲಿಯವರು ಮೈಸೂರು ವಾಸಸ್ಥರಾಗಿ ಮೃತಪಟ್ಟ ಅಬ್ದುಲ್‌ಖಾದರ್ ಸಾಹೇಬರವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 2,953—10—0 ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.